# ಚೂಡಾರತ್ನ ಶತಕ

ಶ್ರೀಗುರುವಂ ನೆನೆಯಲ್ಕೆಡ
ರಾಗದು ಕಂಡಡೆ ಭವಂಗಳೋಡುವುವಲ್ತನು
ರಾಗದಿ ಚರಣಾಶ್ರಯು ಕೊಂ
ಡಾಗಳವಿಹಪರಕೆ ಸೌಖ್ಯ ಚೂಡಾರತ್ನಾ ॥ ೧ ॥

ಮಕ್ಕಳಿಗೆ ತಂದೆ ಬಾಲ್ಯದೊ
ಳಕ್ಕರ ವಿದ್ಯೆಗಳನಱಿಪದಿರ್ದೊಡೆ ಕೊಂದಂ
ಲಕ್ಕ ಧನವಿರಲು ಕೆಡುಗುಂ
ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನಾ ॥ ೫ ॥

ಬರೆಯೊದ ಕೈ ಬಂಧುಗಳಂ
ಪೊರೆಯದ ಕೈ ಸುತರನೆತ್ತಿ ಕೊಂಡಾಡದ ಕೈ
ಕರೆದು ಬುಧರ್ಗೀಯದ ಕೈ
ಮರಗೈ ಮರುಳ್ಗಳಂತೆ ಚೂಡಾರತ್ನಾ ॥ ೬ ॥

ಓದದ ಬಾಯ್ ಅಮೃತಾನ್ನವ
ಮೋದದ ಬಾಯ್ ಸಜ್ಜನರ್ಕಳಂ ಪ್ರಿಯದಿಂದಂ
ಆವರಿಸದ ಬಾಯದು ತಾಂ
ಮೇದಿನಿಯೊಳು ಬಿಲದ ಬಾಯಿ ಚೂಡಾರತ್ನಾ ॥ ೭ ॥

ವಿದ್ಯೆಯೆ ಮಾತಾಪಿತರುಂ
ಬುದ್ಧಿಯೆ ಸೋದರರು ವಿನಯ ವಚನಮೆ ನಂಟುಂ
ಅಧ್ವಾನ ಹಿಂಗಿ ಸುಖದಿಂ
ದಿದ್ದುದೆ ತನ್ನೂರು ಕೇಳು ಚೂಡಾರತ್ನಾ ॥ ೮ ॥

ಓದಿನೊಳಲ್ಲದೆಯಿಹಪರ
ಸಾಧನ ಸಂಪತ್ತು ಮಾಗದದು ಕಾರಣದಿಂ
ಓದುವುದು ಸಕಲ ಶ್ರುತಮುಂ
ಭೇದಿಸಲಳವಪ್ಪುದಲ್ತೆ ಚೂಡಾರತ್ನಾ ॥ ೯ ॥

ತಪ್ಪುತ್ತಿಡಹುತ್ತ್ರೋದು
ತ್ರಿಪ್ಪನ ಬಾಯ್ ಕತ್ತಿವಾಯಿ ಕಾಸನವಾಯ್ತಾಂ
ಕಪ್ಪುರ ಕರಡಗೆ ಬಾಯುಂ
ತಪ್ಪದೆಯೋದುವನ ಬಾಯಿ ಚೂಡಾರತ್ನಾ ॥ ೧೧ ॥

ಉಕ್ಕದೆ ಬಿಕ್ಕದೆ ಲಿಪಿಯಂ ನಕ್ಕದೆ
ತಡವರಿಸದೆಡಹದೆ ಪದವಿ
ಟ್ಟಕ್ಕರ ಬಣಿತೆಯೊಳೋದುವು
ದಕ್ಕರಿಗರ ಮಾರ್ಗವಲ್ತೆ ಚೂಡಾರತ್ನಾ ॥ ೧೭ ॥

ಎಡರದೆ ತಡೆಯದೆ ತಲೆಯಂ
ಕೊಡಹದೆ ಕಡುವಹಿಲಜಾಡ್ಯವೆನಿಸದೆ ರಸಮಂ
ಕೆಡಿಸದೆ ಸರ್ವರ ಚಿತ್ತ
ಕ್ಕೊಡಬಡಲೋದುವನೆ ಗಮಕಿ ಚೂಡಾರತ್ನಾ ॥ ೧೮ ॥

ಬಲ್ಲಿದರುಳ್ಳೊಡೆ ವಿದ್ಯೆಗ
ಳೆಲ್ಲಂ ಪಲ್ಲವಿಸುತಿರ್ಕುಮೆಂತೆನೆ ಪೇಳ್ವೆಂ
ಸಲ್ಲಲಿತ ಸೌಖ್ಯಲತೆಯುಂ
ಪಲ್ಲವಿಸುವ ತೆರದಿಂದಲೆ ಚೂಡಾರತ್ನಾ ॥ ೨೦ ॥

ಕಿಱಿದಾದ ವಿದ್ಯೆಯಾಗಲಿ
ಮೆಱೆವುದು ತನ್ನಲ್ಲಿ ಗುಣಗಳುಳ್ಳೊಡೆ ಮತ್ತಾ
ಒಱತೆಯು ನೀರಾದೊಡೆ ತಾಂ
ಬಱನಂ ಪಿಂಗಿಸದೆ ನೋಡು ಚೂಡಾರತ್ನಾ ॥ ೨೮ ॥

ಕೊಲ್ವುದು ಧರ್ಮವೆ ಪರವಧು
ಗೊಲ್ವುದದೇ ಸೊಬಗೆ ಪಾಪಹೇತುಂಗಳೊಂದಂ
ಕಳ್ವುದು ನೀತಿಯನುಜರ
ಗೆಲ್ವುದದೇಂ ಚದುರೆ ಕೇಳು ಚೂಡಾರತ್ನಾ ॥ ೨೫ ॥

ತಮತಮಗೆ ಬುದ್ಧಿವಂತರು
ತಮತಮಗೆಯು ವಿದ್ಯದಲ್ಲಿಯಧಿಕರು ಚೆಲುವರು
ತಮತಮಗೆ ಗುಣಿಗಳಲ್ಲದೆ
ತಮತಮಗವಗುಣಗಳುಂಟೆ ಚೂಡಾರತ್ನಾ ॥ ೨೭ ॥

ಚಂದನ ಹಿಮ ಪನ್ನೀರಿಂ
ಚಂದಿರ ಕಿರಣಂ ವಿಶೇಷ ಶೈತ್ಯಂ ಮತ್ತಾ
ಚಂದನ ಹಿಮ ಪನ್ನೀರ್ ಶಶಿ
ಯಿಂದಂ ಮೃದುವಚನ ಶೈತ್ಯ ಚೂಡಾರತ್ನಾ ॥ ೨೯ ॥

ಆಡಿದ ಜಾಣ್ನುಡಿಯಂ ಕೊಂ
ಡಾಡಿ ಕರಂ ಮೆಚ್ಚಬಲ್ಲ ಸಜ್ಜನರೊಳು ಮಾ
ತಾಡುವುದಲ್ಲದೆ ಪುರುಷಂ
ಮೂಢರೊಳಾಡುವರೆ ಕೇಳು ಚೂಡಾರತ್ನಾ ॥ ೩೧ ॥

ಎಲ್ಲಿ ಸುಶೀಲಂ ಸದ್ಗುಣ
ಮೆಲ್ಲಿ ದಯೆ ಧರ್ಮಮೆಸೆವ ಸತ್ಯಂ ನೆಲೆಗೊಂ
ಡಲ್ಲಿಯೆ ಆಯುಂ ಸಿರಿಯುಂ
ಸಲ್ಲೀಲೆಯೊಳಿಪ್ಪುವಲ್ತೆ ಚೂಡಾರತ್ನಾ || ೩೮ ||

ಸಿರಿತನವೊಲಿದಲ್ಲಿಯೆ ಕರೆ
ಕರೆದೀವುದು ಬಂಧುಜನಕಮಾಶ್ರಿತಜನಕಂ
ಕರೆದೀಯದಿರ್ದೆಯಾದೊಡೆ
ಸಿರಿ ಸಂಧ್ಯೆಯ ನೆರವಿಯಂತೆ ಚೂಡಾರತ್ನಾ || ೪೩ ||

ದೀನರು ದಯಹೀನರು ಗುಣ
ಹೀನರುಗಳು ಲಕ್ಷಸಂಖ್ಯೆಯಿದ್ದೇಂ ಬಂದೇಂ
ದಾನಿ ಜಗದೊಳಗೆ ಸಂತತ
ಭಾನುವಿನಂತೊಬ್ಬನಿಹನು ಚೂಡಾರತ್ನಾ || ೫೦ ||

ಆರಿತ್ತು ಬಡವರಾದರು
ಆರೀಯೆ ಧನಿಕರಾಗಿ ಜಗದೊಳಗೆ ಬಾಳ್ದರು
ಊರುಂಬ ಕೆರೆಯುಮುಡವಿಯ
ನೀರುಂ ಕಾಲಕ್ಕೆ ಸರಿಯೆ ಚೂಡಾರತ್ನಾ || ೫೧ ||

ವಿನಯುದೊಳಿತ್ತಾ ದಾನಂ,
ಕನಕಾದ್ರಿಗೆ ತತ್ಸಮಾನ, ಕನಲುತ ಮುನಿಯುತ,
ಜಿನುಗುತ್ತಿತ್ತಾ ದಾನಂ,
ಮೊನೆಯಿಲ್ಲದ ಘಾಯುದಂತೆ, ಚೂಡಾರತ್ನಾ ॥ ೫೩ ॥

ಉಟ್ಟೊಡೆ ಮಾಸುಗು ಕಪ್ಪಡ,
ತೊಟ್ಟೊಡೆ ತಾಂ ಸವೆವುದಖಿಳ ಹೇಮಾಭರಣಂ,
ನೆಟ್ಟನೆ ತನುವಳಿವುದು, ಮೇಣ್
ಕೊಟ್ಟುವನೊಡಲೊಡವೆ ಕೆಡದು ಚೂಡಾರತ್ನಾ ॥ ೫೯ ॥

ಕನಕದ ಸಿಂಹಾಸನದೊಳು,
ಶುನಕನ ಕುಳ್ಳಿರಿಸಿ ಸೇಸೆದಳಿಯಲು, ಮತ್ತಂ
ತನು ಕೆರಳಿ ಬಗುಳ್ವುದಲ್ಲದೆ,
ಘನತೆಯುದಕುಂಟೆ, ವಿವೇಕ ಚೂಡಾರತ್ನಾ, ॥ ೬೨ ॥

ಆರಾರುಂ ರಕ್ಷಿಪರಿ,
ನ್ನಾರಾರುಂ ಕಾಯ್ದು ಕೊಲ್ವರೆಂಬುದು ಪುಸಿ, ಮು
ನ್ನಾರಾಧಿಸಿ ಪಡೆದುದನಿ,
ನ್ನಾರಾರುಂ ಕಳೆಯುಬಹುದೆ, ಚೂಡಾರತ್ನಾ, ॥ ೬೩ ॥

ಹಿಂದಂ ನೆನೆದವನೇ ಸುಖಿ,
ಮುಂದಂ ನೆನೆದವನೆ ದುಃಖಿಯಿಂತೆರಡರೊಳಂ,
ಬಂದುದನನುಭವಿಪನೇ ಬುಧ
ನೆಂದುಂ ಸಾಯದನೆ ದೇವ, ಚೂಡಾರತ್ನಾ ॥ ೭೭ ॥

ಚಿಂತಿಪನೆ ನರಕಿ, ಸಲೆ ನಿ
ಶ್ಚಿಂತನೆ ಸುಖಿ, ಕೋಪಮುಳ್ಳೊಡಾತನೆ ಪಾಪಿಯುಂ
ಸಂತೋಷಿಯೆ ಸಿರಿವಂತಂ,
ಭ್ರಾಂತಳಿದನೆ ಪರಮಯೋಗಿ, ಚೂಡಾರತ್ನಾ ॥ ೭೮ ॥

ಜಾತಸ್ಯ ಮರಣ ತಪ್ಪದು,
ಯೇತಕೆ ಚಿಂತಿಸುವೆ, ಬರಿದೆ ಹಣೆಯಲಿ ಬರೆದಿರೆ,
ಕಾತರಿಸಬೇಡ ಮಾನವ,
ಭೀತಿಯ ಬಿಡು ಹರಣದೆಡೆಗೆ, ಚೂಡಾರತ್ನಾ, ॥ ೮೨ ॥

ರಕ್ಷಿಪನೆ ತಂದೆ, ಹಸಿದರೆ
ಕುಕ್ಷಿಯ ತುಂಬುವಳೆ ತಾಯಿ, ಕಡು ದುರ್ಜನರಂ
ಶಿಕ್ಷಿಪನೆ ನೃಪತಿ, ಪುರುಷನ
ಪಕ್ಷದೊಳಿಪ್ಪವಳೆ ಸುದತಿ, ಚೂಡಾರತ್ನಾ ॥ ೯೫ ॥

ಸಲಿಲದಿ ವನರುಹಮಿರಲ್ಕದ
ನಲರಿಸುವಂ ದಿನಪ ತನ್ನ ನಿಜಕರಕಿರಣದಿ,
ಜಲ ತಪ್ಪಿದರೊಣಗಿಸುವಂ,
ನೆಲೆಗೆಟ್ಟಿಗರ್ಗಿಷ್ಟರುಂಟೆ ಚೂಡಾರತ್ನಾ ॥ ೯೮ ॥

ಅರಗಿಳಿಯಿಲ್ಲದ ವನಮುಂ,
ಗುರುವಿಲ್ಲದ ಮಠವು ಹಿರಿಯರಿಲ್ಲದ ಮನೆಯುಂ,
ಗರುವಿಕೆಯಿಲ್ಲದ ಸತಿಯುಂ,
ವರವಿಲ್ಲದ ದೇವರೇಕೆ ಚೂಡಾರತ್ನಾ ॥ ೧೦೪ ॥

ಕಾಗೆ ಮೊದಲಾಗಿ ಬಂಧುವ
ನೇಗಯ್ಸಿಯುಂ ಕರೆದೊಡಲ್ಲದೀವುದು ಗುಟುಕಂ,
ಶ್ರೀಗಧಿಪನೊಬ್ಬನುಂಬುದು
ಮಾಗದು ಧರಿತ್ರಿಯಲಿ ಪೇಳ್ ಚೂಡಾರತ್ನಾ, ॥ ೧೦೫ ॥

ನಾರಿ ಮನೆಕಳ್ಳಿಯಾದೊಡೆ,
ಕೇರಿಯು ತಳವಾರ ಚೋರನಾದೊಡೆ, ಮತ್ತಾ
ಭಾರಿಕ ಕೊಂಡೆಯನಾದೊಡೆ,
ಪೂರೇಳಿಗೆಯಾಗದಿಹುದು ಚೂಡಾರತ್ನಾ ॥ ೧೦೮ ॥

ದೀನನ ದೊರೆತನದಿಂದಂ,
ದಾನಿಯು ಬಡತನವೆ ಲೇಸ್ಸದಂತೆನೆ ಶರನಿಧಿ
ಪಾನೀಯಕ್ಕೆ ಯೋಗ್ಯವೆ ಸ
ನ್ನಾನಂ ಚಿಕ್ಕೊರತೆ ಲೇಸು ಚೂಡಾರತ್ನಾ ॥ ೧೧೦ ॥

ಪ್ರೇರಣೆಯೆಂಬುದು ವೈಸಿರಿ
ಪ್ರೇರಣೆಯುಂ ಜಪತಪವು ದಾನವು ಧರ್ಮಂ
ಪ್ರೇರಣೆಯೆ ಶಾಶ್ವತ ಸುಖಂ
ಪ್ರೇರಣೆಯೆ ಸಕಲರಿಗೆ ಹಿತ ಚೂಡಾರತ್ನಾ ॥ ೧೧೪ ॥

ಪತಿಯಾಜ್ಞೆಯೊಳಡಗದ ಸತಿ
ಹುತವಹನಂತುರಿವ ಮಂತ್ರಿ ಕೋಪವಡಂಗದ
ಯತಿ ದಯವಿನಿತಿಲ್ಲದ ನೃ
ಪತಿ ಭೂಮಿಗೆ ಭಾರವಲ್ತೆ ಚೂಡಾರತ್ನಾ ॥ ೧೨೩